(ರೂ. ಕೋಟಿಗಳಲ್ಲಿ)

ವರ್ಗ	ಕಾರ್ಡುಗಳ ಸಂಖ್ಯೆ	ಆಹಾರ ಸಹಾಯ ಧನ	ಸಾಗಾಣಿಕೆ ವೆಚ್ಚ	ಒಂದು ಮಾಹೆಗೆ ಆಗುವ ವೆಚ್ಚ	ವಾರ್ಷಿಕವಾಗಿ ಆಗುವ ವೆಚ್ಚ
ಎಎವೈ	1116087	0.00	1.68	1.68	20.16
ಬಿಪಿಎಲ್ ಮತ್ತು ಇಬಿಪಿಎಲ್	6272324	43.10	4.36	47.46	569.52
ನೆಮ್ಮದಿ ಕೇಂದ್ರ ಬಿಪಿಎಲ್)	2305200	45.74	1.58	47.32	567.84
ಒಟ್ಟು	**9693611**	**88.84**	**7.62**	**96.46**	**1157.52**

ಶೇಕಡ 3ರ ಬಡ್ಡಿ ದರದಲ್ಲಿ ಸಾಲ

977 (1437) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2009–10ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ವಿವಿಧ ಸಹಕಾರ ಸಂಘ ಮತ್ತು ಬ್ಯಾಂಕುಗಳಲ್ಲಿ ಎಷ್ಟು ಜನ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಶೇಕಡ 3 ರ ಬಡ್ಡಿ ದರದಲ್ಲಿ ಸಾಲ ಸೌಲಭ್ಯ ಪಡೆದು ಕೊಂಡಿದ್ದಾರೆ?

ಆ) ಈ ಸಾಲಿನಲ್ಲಿ ಜಿಲ್ಲೆಯ ಎಷ್ಟು ಜನ ರೈತರಿಗೆ ಸಾಲ ನೀಡುವ ಗುರಿಯನ್ನು ಹೊಂದಲಾಗಿತ್ತು? ಈ ಪೈಕಿ ಎಷ್ಟು ಗುರಿಯನ್ನು ಸಾಧನೆ ಮಾಡಲಾಗಿದೆ?

ಇ) ಜಿಲ್ಲೆಯಲ್ಲಿ ಇನ್ನೂ ಅನೇಕ ಸಣ್ಣ ಮತ್ತು ಅತಿ ಸಣ್ಣ ರೈತರು ಈ ಸಾಲಕ್ಕೆ ಅರ್ಹರಾಗಿದ್ದರೂ ಅವರಿಗೆ ಸಾಲ ಸೌಲಭ್ಯ ಒದಗಿಸದಿರಲು ಕಾರಣಗಳೇನು?

ಈ) ಪ್ರಸಕ್ತ ಸಾಲಿನಲ್ಲಿ ಈ ಕೊರತೆಯನ್ನು ನೀಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುವುದು?

ಉ) ಕೇವಲ ಸಹಕಾರಿ ಸಂಸ್ಥೆಗಳಲ್ಲದೇ, ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕವೂ ರೈತರಿಗೆ ಶೇಕಡ 3 ರ ಬಡ್ಡಿ ದರದಲ್ಲಿ ಸಾಲ ದೊರಕಿಸಿ ಕೊಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಲಕ್ಷ್ಮಣ ಸವದಿ (ಸಹಕಾರ ಸಚಿವರು) :

ಅ) 2009–10ನೇ ಸಾಲಿನಲ್ಲಿ ಬೀದರ್ ಜಿಲ್ಲೆಯ ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ವತಿಯಿಂದ ಶೇಕಡಾ 3ರ ಬಡ್ಡಿ ದರದಲ್ಲಿ 121162 ಸಣ್ಣ ಮತ್ತು ಅತಿ ಸಣ್ಣ ರೈತರು ರೂ.140.89 ಕೋಟಿ ಸಾಲವನ್ನು ಹಾಗೂ ಜಿಲ್ಲಾ ಕಸ್ಕಾರ್ಡ್ ಬ್ಯಾಂಕ್ ವತಿಯಿಂದ ದೀರ್ಘಾವಧಿ ಕೃಷಿ ಸಾಲವನ್ನು 64 ಜನ ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿದ್ದಾರೆ.

ಆ) ಈ ಸಾಲಿನಲ್ಲಿ ವಿತರಿಸುವ ಸಾಲದ ಗುರಿ ಹಾಗೂ ಸಾಧನೆ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

ಬ್ಯಾಂಕಿನ ಹೆಸರು	ಗುರಿ		ಸಾಧನೆ	
ಬೀದರ್ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್	115000	230.00	105350	215.00
ಜಿಲ್ಲೆಯಲ್ಲಿನ ಪಿಕಾರ್ಡ್ ಬ್ಯಾಂಕುಗಳಿಂದ	661	–	102	–

ಇ) ಸಾಲಕ್ಕಾಗಿ ಕೋರಿರುವ ಪೈಕಿ ಅರ್ಹರಿರುವ ಎಲ್ಲಾ ರೈತರಿಗೆ ಸಾಲ ನೀಡಲಾಗಿದೆ.

ಈ) ಅನ್ವಯಿಸುವುದಿಲ್ಲ.

ಉ) ಸಹಕಾರಿ ಸಂಸ್ಥೆಗಳಿಗೆ ಸಮಾನವಾಗಿ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಶೇಕಡಾ 3 ರ ಬಡ್ಡಿ ದರದಲ್ಲಿ ಸಾಲ ದೊರಕಿಸಿಕೊಡುವ ಪ್ರಸ್ತಾವವು ಸರ್ಕಾರದ ಮುಂದೆ ಇರುವುದಿಲ್ಲ.

ಕೋಲಾರ ಸಹಕಾರಿ ಬ್ಯಾಂಕ್ ದಿವಾಳಿ

1046 (981) ಶ್ರೀ ಎನ್.ಎಚ್. ಶಿವಶಂಕರರೆಡ್ಡಿ (ಗೌರಿ ಬಿದನೂರು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲಾ ಸಹಕಾರ ಬ್ಯಾಂಕ್ ದಿವಾಳಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ವೈದ್ಯನಾಥನ್ ಸಮಿತಿ